O.S. ನಂಬರಃ 24/2019

ಪಿ. ಡಬ್ಲ್ಯೂಃ 1

ದಿಃ 05-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ ವಾದಿಯರ ಪರ ಶ್ರೀ ಎ.ಎನ್. ಟಿ ವಕೀಲರಿಂದಃ</u>

ದಾವೆಯಲ್ಲಿ ಸಾಕ್ಷಿ ನುಡಿಯಲು ನನ್ನ ಸಹೋದರ-ಸಹೋದರಿಯರು ಅಧಿಕಾರ ಪತ್ರ ನೀಡಿಲ್ಲ ಎಂದರೆ ಸರಿ. ರಾಧಾ ಕೋಂ ರಾಯಾ ನಾಯ್ಕು ರವರ ಸರಳವಾರಸುದಾರರು ಎಂದು ತೋರಿಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ವಾರಸಾ ಪ್ರಮಾಣ ಪತ್ರ ನೀಡದೇ ಇರುವುದರಿಂದ ದಾವೆಯಲ್ಲಿ ಪಾಲು ಕೇಳಲು ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ನಮ್ಮ ತಾಯಿ-ತಂದೆಯಿಂದ ಬಂದಿದ್ದು, ಪಿತ್ರಾರ್ಜಿತ ಆಸ್ತಿಗಳು ಎಂದು ಹೇಳುತ್ತಾರೆ. ನನ್ನ ತಾಯಿಯ ತಂದೆಯ ತಂದೆ ಹೆಸರು ಸಾತಯ್ಯ ಇರಬಹುದು. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಮುಟೇಶನ ಪ್ರತಿ ಹಾಗೂ ಉತಾರೆ ನೋಡಿದ್ದೇನೆ. ನನ್ನ ತಾಯಿಯ ತಂದೆಗೆ ಇಬ್ಬರು ಮಕ್ಕಳು, ಅವರಲ್ಲಿ ನನ್ನ ತಾಯಿ ಮಗಳು ಇರುತ್ತಾಳೆ. ನನ್ನ ತಾಯಿಯ ತಂದೆಗೆ ಎಷ್ಟು ಜನ ಸಹೋದರರು ಮತ್ತು ಸಹೋದರಿಯರು ಎಂದರೆ ಸಾಕ್ಷಿ ಒಬ್ಬ ಸಹೋದರ ಇದ್ದ. ಆತನ ಹೆಸರು ಕೀರಾ ಯಾನೆ ಸಾತಪ್ಪ ತುಕ್ಕಪ್ಪ ನಾಯ್ಕು

ಎಂದರೆ ಸರಿ. ಕೀರನಿಗೆ 2 ಜನ ಮಕ್ಕಳು, ಅವರು ಈ ದಾವೆಯಲ್ಲಿ 2 ಮತ್ತು 3 ನೇ ಪ್ರತಿವಾದಿಯರಾಗಿರುತ್ತಾರೆ ಎಂದರೆ ಸರಿ.

ದಾವಾ ಸರ್ವೆ ನಂ.616/3 ಕ್ಕೆ ಕೀರಾ ತುಕ್ಕಪ್ಪ ನಾಯ್ಕು ಮುಂಬೈ ಗೇಣಿ ಕಾಯ್ದೆಯಡಿಯಲ್ಲಿ ಸಂರಕ್ಷಿತ ರೈತನಿದ್ದ ಎಂದರೆ ಮಾಹಿತಿ ಇಲ್ಲ. ಸದರಿ ಆಸ್ತಿಯ ದಾಖಲೆಯಲ್ಲಿ ಕೀರಾ ಸಂರಕ್ಷಿತ ವಕ್ಕಲಾದ(ರೈತ) ಎಂದು ನಮೂದು ಇದೆ ಎಂದರೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಸರ್ವೆ ನಂ.616/3 ಕೀರಾ ತುಕ್ಕಪ್ಪ ನಾಯ್ಕುನ ಸ್ವಯಾರ್ಜಿತ ಗೇಣಿ ಹಕ್ಕಿನ ಆಸ್ತಿ ಎಂದರೆ ಆ ಕುರಿತು ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಸದರಿ ಸಂಪೂರ್ಣ ಜಮೀನನ್ನು ಕೀರಾ ಸಾಗುವಳಿ ಮಾಡಿಕೊಂಡು ಬಂದಿದ್ದ ಎಂದರೆ ಮಾಹಿತಿ ಇಲ್ಲ. ನನ್ನ ತಾಯಿಯ ತಂದೆ ಜಮೀನು ಸಾಗುವಳಿ ಮಾಡುವಕ್ಕಿಂತ ಮೊದಲು ಯಾರ ಸಾಗುವಳಿಯಲ್ಲಿತ್ತು ಎಂದು ಮಾಹಿತಿ ಇಲ್ಲ. ಸದರಿ ಜಮೀನು ಕೀರಾನಿಗೆ ತಂದೆಯಿಂದ ಬಂದಿರಲಿಲ್ಲ ಎಂದರೆ ಸಾಕ್ಷಿ ಹಿಂದಿನ ದಾಖಲೆ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ದಾವಾ ಆಸ್ತಿಗಳಲ್ಲಿ ನನ್ನ ತಾಯಿಯ ತಂದೆಗೆ ಯಾವ ರೀತಿ ಹಕ್ಕು ಪ್ರಾಪ್ತವಾಗಿದೆ ಎಂದು ದಾಖಲೆ ತೆಗೆದು ನೋಡಿಲ್ಲ, ಅದರೆ ತಾಯಿಯಿಂದ ಮಾಹಿತಿ ಪಡೆದಿದ್ದೇನೆ ಎಂದು ಹೇಳುತ್ತಾರೆ. ಕೀರಾ ಮೃತಪಟ್ಟ ನಂತರ ಸರ್ವೆ ನಂ.616/3 ನನ್ನ ತಾಯಿಯ ತಂದೆ ಮತ್ತು ಕೀರಾನ ಮಕ್ಕಳ ಹೆಸರಿನಲ್ಲಿ ವಾರಸಾ ಆಗಿದೆ. ಸದರಿ ಆಸ್ತಿ ನನ್ನ ತಾಯಿಯ ತಂದೆಗೆ ಆತನ ಸಹೋದರನಾದ ಕೀರಾನಿಂದ ಪ್ರಾಪ್ತವಾಗಿದೆ ಎಂದರೆ ಸರಿ. ಸದರಿ ನನ್ನ ತಾಯಿಯ

ತಂದೆಗೆ ಬಂದ ಆಸ್ತಿ ಅದು ಆತನ ಸ್ವಯಾರ್ಜಿತವಾಗಿದೆ ಎಂದರೆ ಸಾಕ್ಷಿ ಆ ಕುರಿತು ದಾಖಲೆ ನೋಡಿಲ್ಲ, ಕಾರಣ ಒಪ್ಪಿಕೊಳ್ಳುವುದಿಲ್ಲ ಎಂದು ಹೇಳುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.